# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ, ಪುಲಿಕೇಶಿನಗರ ಉಪವಿಭಾಗ, ರಾಬರ್ಟಸನ್ಸ್ ರಸ್ತೆ, ಫ್ರೇಜರ್ ಟೌನ್**

ಸ.ಕಾ.ನಿ.ಅ/ಮನ/ಪಿಆರ್/೨೨೩ /2021-22 ದಿನಾಂಕ: 07/10/21

**ದಿನಾಂಕ:- 07-10-2021 ರಂದು ವಾರ್ಡ್ ನಂ.78 ರ ವಾರ್ಡ್ ಸಮಿತಿ ಹಾಗೂ ವಾರ್ಡ್ ವಿಪತ್ತು ನಿರ್ವಹಣಾ ಸಮಿತಿಯ ಸಭೆಯ ನಡುವಳಿಗಳು:-**

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಜಿ.ತಿಪ್ಪೇಸ್ವಾಮಿ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ತಿಳಿಸಲು ಸೂಚಿಸಿರುತ್ತಾರೆ.

1. ಸ್ಟೀಫನ್ಸ್ ರಸ್ತೆಯಲ್ಲಿರು ಕಸದ ಪಾಯಿಂಟ್‌ಗಳನ್ನು ತೆರವುಗೊಳಿಸಲು ತಿಳಿಸಲಾಗಿರುತ್ತದೆ.
2. ಮೋರ್ ರಸ್ತೆಯ ಇಂದಿರಾ ಕ್ಯಾಟಿನ್ ಹತ್ತಿರ ಡೆಬ್ರೀಸ್ ತೆರವುಗೊಳಿಸಲು ಸೂಚಿಸಲಾಗಿರುತ್ತದೆ.
3. ರಾಬರ್ಟ್ ಸನ್ ಮತ್ತು ವಿಲ್ಲರ್ ರಸ್ತೆಯ ಜಂಕ್ಷನ್ ಹತ್ತಿರ ಇರುವ ಚರಂಡಿಯಲ್ಲಿ ಹೂಳು ತೆಗೆಯಲು ಸೂಚಿಸಲಾಗಿರುತ್ತದೆ.
4. ವಾರ್ಡ್ ವ್ಯಾಪ್ತಿಯಲ್ಲಿರುವ ರಸ್ತೆ ಗುಂಡಿಗಳನ್ನು ತುರ್ತಾಗಿ ಮುಚ್ಚಲು ತಿಳಿಸಲಾಗಿರುತ್ತದೆ.
5. ಕೋಲ್ಸ್ ರಸ್ತೆಯಲ್ಲಿ ನಡೆಯುತ್ತಿರುವ ವೈಟ್‌ಟಾಪಿಂಗ್ ಕಾಮಗಾರಿಯಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು ತುರ್ತಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಗಿರುತ್ತದೆ.
6. ಎಂ.ಎಂ ರಸ್ತೆಯಲ್ಲಿ ರಾತ್ರಿ ವೇಳೆಯಲ್ಲಿ ಬೀದಿ ನಾಯಿಗಳಿಂದ ತೊಂದರೆಯಾಗುತ್ತಿರುವ ಬಗ್ಗೆ ಸಾರ್ವಜನಿಕರು ಸಭೆಯಲ್ಲಿ ತಿಳಿಸಿರುತ್ತಾರೆ.
7. ವಿಲ್ಲರ್ ರಸ್ತೆಯ ಕ್ರಾಸ್‌ನಲ್ಲಿ ಕಲ್ವರ್ಟ್ ಮುರಿದು ಹೋಗಿದ್ದು, ಕೂಡಲೇ ಹೊಸ ಕಲ್ವರ್ಟ್ ಹಾಕಲು ಸಂಬಂಧಪಟ್ಟ ಅಭಿಯಂತರರಿಗೆ ಸೂಚಿಸಲಾಗಿರುತ್ತದೆ.
8. ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ಹಾಕಿರುವ ಬಗ್ಗೆ ಹಾಗೂ ಕೋವಿಡ್-19 ರ ಟೆಸ್ಟಿಂಗ್ ಮಾಹಿತಿಯನ್ನು ಮಾಹಿತಿ ನೀಡಲು ತಿಳಿಸಲಾಗಿರುತ್ತದೆ.
9. ವಿವಿಧ ಇಲಾಖೆಯ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಮಿಟಿಂಗ್‌ಗೆ ಹಾಜರಾಗಲು ತಿಳಿಸಲಾಯಿತು.

ನಂತರ ಮುಂದಿನ ಸಭೆಯೊಳಗೆ ಮೇಲ್ಕಂಡ ಕೋವಿಡ್-19 ರ ಬಗ್ಗೆ ವಾರ್ಡ್ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಲು ಸೂಚಿಸುತ್ತಾ, ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು

ಕಾರ್ಯದರ್ಶಿ

**ಪ್ರತಿಯನ್ನು:**

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಾರ್ಡ್ ಸಮಿತಿಯ ಸದಸ್ಯರು, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
3. ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ / ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ

Scanned with CamScanner